
ಮುಂದಿನ ಸಾಲಿನಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಯಲ್ಲ. ಸದ್ದಿಲ್ಲದೆ ಸಭಾಂಗಣ ಪ್ರವೇಶಿಸಿ, ಕೊನೆಯ ಸಾಲಿನಲ್ಲಿ ಕುಳಿತು ಎಲ್ಲವನ್ನೂ ಪರಿಶೀಲಿಸುತ್ತ ನೋಟ್ಸ್ ಮಾಡಿಕೊಂಡು ತೆರಳುತ್ತಾನೆ. ಅವನ ಬರಹಗಳು ಸದ್ದು ಮಾಡಬೇಕೇ ವಿನಃ ಅವನೇ ಪ್ರಧಾನವಾಗಿ ಬಿಡಬಾರದು. ಆದರೆ ಭಾರತದಲ್ಲಿ ಅದೇಕೋ, ವಿಮರ್ಶಕರು ವೇದಿಕೆಯ ಮುಂಭಾಗದಲ್ಲೇ ಪ್ರತ್ಯಕ್ಷರಾಗಿ, ಕಲಾವಿದರಿಂದ ಹಾರವೋ, ಶಾಲನ್ನೋ



ಹಾಕಿಸಿಕೊಂಡು ಮೆರೆಯುವುದುಂಟು. ವಿಮರ್ಶಕರು ಮತ್ತು ಪಿ.ಆರ್. ಏಜೆಂಟ್‌ಗಳ ನಡುವೆ ವ್ಯತ್ಯಾಸ ಸ್ಪಷ್ಟವಾಗಿರಬೇಕು. ನೃತ್ಯಗುರುಗಳ ಕೃಪೆಯನ್ನು ಕಾಯುವವರೆಲ್ಲ ವಿಮರ್ಶಕರು ಎನ್ನಿಸಿಕೊಳ್ಳಲಾರರು ಅಲ್ಲವೇ. ವೈಯಕ್ತಿಕ ಶಿಸ್ತು, ನೈತಿಕತೆಗಳು ವಿಮರ್ಶಕನಿಗೆ ಅಗತ್ಯ. ಜ್ಞಾನದ ಬೆಂಬತ್ತಿ ಹೋಗುವವರ ಪಾಲಿಗೆ ಪ್ರಶಸ್ತಿಗಳು ಅಷ್ಟೇನೂ ಮೌಲ್ಯಯುತ ಎನಿಸುವುದಿಲ್ಲ. ಸಮಯ ಸಂದರ್ಭಗಳು ಎದುರಾದಾಗ ಒಂಚೂರು ಬೇಸರವೋ, ಸಿನಿಕತನವೋ ನುಸುಳಿ ಹೋಗಬಹುದೇನೋ. ಆದರೆ ಅದು ನನ್ನ ಒಟ್ಟಾರೆ ಕೆಲಸದ ಮೇಲೆ ಏನೂ ಪ್ರಭಾವ ಬೀರುವುದಿಲ್ಲ. ನನ್ನ ಬರವಣಿಗೆಯನ್ನು ನಾನು ಬಹಳ ಇಷ್ಟಪಟ್ಟು ಮಾಡುತ್ತೇನೆ. ಅದಕ್ಕಾಗಿ ಸಮಯ ಹೊಂದಿಸಿಕೊಳ್ಳಲು ಕಷ್ಟವಾಗುವುದಿಲ್ಲ ನನಗೆ.

**◆ ಇತ್ತೀಚೆಗೆ ಭರತನಾಟ್ಯ ಪ್ರಸ್ತುತಿಯಲ್ಲಿ ಸಮಕಾಲೀನ ವಿಚಾರಗಳನ್ನು ಅಭಿನಯಿಸುವ ಪ್ರಯತ್ನವನ್ನು ಹೊಸತಲೆಮಾರಿನ ಕಲಾವಿದರು ಮಾಡುತ್ತಿದ್ದಾರೆ. ಅಂದರೆ, ಡಿಜಿಟಲ್ ಪ್ರಭಾವದ ಜೀವನಶೈಲಿಯ ಅಭಿನಯವನ್ನು ಪ್ರಸ್ತುತಪಡಿಸುವ ಪ್ರಯತ್ನ. ಉದಾಹರಣೆಗೆ, ಪ್ರಿಯತಮೆಯು ತನ್ನ ಪ್ರಿಯಕರನಿಗಾಗಿ ಕಾಯುವಾಗ ಅಲಂಕರಿಸಿಕೊಳ್ಳುವ, ಬಾಗಿಲಿಗೆ ಬಂದು ಕಾಯುವ ಪ್ರಕ್ರಿಯೆಯ ಜೊತೆಗೆ ಪದೇ ಪದೇ ಮೊಬೈಲ್‌ನಲ್ಲಿ ಮೆಸೇಜು ನೋಡುವ, ಲ್ಯಾಪ್‌ಟಾಪ್‌ನಲ್ಲಿ ಏನೋ ಕೆಲಸ ಮಾಡುವ ಸನ್ನಿವೇಶಗಳನ್ನು ಅಭಿನಯಿಸಿ ತಮ್ಮ ವಯೋಮಾನದ ಸ್ನೇಹಿತರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ಹೊಸ ಪ್ರಯತ್ನಗಳನ್ನು ನೀವು ಗಮನಿಸಿದ್ದೀರಾ? ಸಾಂಪ್ರದಾಯಿಕ ನೃತ್ಯ ಪರಂಪರೆಯಲ್ಲಿ ಇದು ಹೇಗೆ ಗುರುತಿಸಿಕೊಳ್ಳುತ್ತದೆ? ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಪರಂಪರೆ ಮತ್ತು ಸಂಪ್ರದಾಯ ಎನ್ನುವ ಪದವೇ ಸೀಮಿತ ಅರ್ಥವನ್ನು ಹೊಂದಿದೆ. ಉದಾಹರಣೆಗೆ, ಭರತನಾಟ್ಯ ಪರಂಪರೆ ಎಂದು ಹೇಳಿದ ತಕ್ಷಣ ಅದರ ಇತಿಹಾಸ ಕೇವಲ ಇನ್ನೂರು ವರ್ಷದ್ದಷ್ಟೇ ನಮಗೆ ಕಾಣುವುದು. ತಂಜಾವೂರು ಸಹೋದರರು 'ಮಾರ್ಗಂ ಶೈಲಿ'ಯನ್ನು ನಿರೂಪಿಸಿದಲ್ಲಿಂದ ನಾವು ಪರಂಪರೆಯನ್ನು ಲೆಕ್ಕಕ್ಕೆ ಹಿಡಿಯುತ್ತೇವೆ. ಆದರೆ ಅದಕ್ಕೂ ಮುನ್ನ ಭರತನಾಟ್ಯಂ ಅಸ್ತಿತ್ವದಲ್ಲಿ ಇತ್ತು. ಅದು ಪರಂಪರೆ ಅಲ್ಲವೇ? ಹೀಗೆ ನಾವು ಪರಂಪರೆ ಎಂದು ಹೇಳುವಾಗ ಅದರ ಆಳ ಅಗಲ ವ್ಯಾಪ್ತಿಯನ್ನು ನಮ್ಮ ಅಳವಿಗೆ ತಕ್ಕಷ್ಟನ್ನೇ ಲೆಕ್ಕಮಾಡಿಕೊಳ್ಳುತ್ತೇವೆ. ಆದರೆ, ಪರಂಪರೆ ಎನ್ನುವುದು ಆದಿಯಿಲ್ಲದ್ದು ಎನ್ನಬಹುದು.

ಶಾಸ್ತ್ರೀಯ ನೃತ್ಯ ಕ್ಷೇತ್ರದಲ್ಲಿ ನಿರಂತರವಾಗಿ ಅನ್ವೇಷಣೆಗಳು ಆಗುತ್ತಲೇ ಇವೆ. ಒಂದೊಂದು ಕಾಲಕ್ಕೆ ಒಬ್ಬೊಬ್ಬರು ಕಲಾವಿದರು ಅಥವಾ